ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1112
ಸದಸ್ಯರ ಹೆಸರು	:	ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ:	:	22.12.2021
ಉತ್ತರಿಸುವ ಸಚಿವರು		ಮಾನ್ಯ ಪಶುಸಂಗೋಪನಾ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಇತ್ತೀಚೆಗೆ ಬೆಂಗಳೂರು ನಗರದ ಹೆಬ್ಬಾಳದಲ್ಲಿರುವ ಸರ್ಕಾರೇತರ ಪ್ರಾಣಿಗಳ ವಸತಿಗೃಹವಾದ "ಕರುಣಾ ಪ್ರಾಣಿ ಆಶ್ರಯ ಧಾಮ" ದ ವಿರುದ್ಧ ಅಕ್ರಮದಿಂದ ಹಣ ಸುಲಿಗೆಯ ಆರೋಪಗಳು ಕೇಳಿಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ. ಸರ್ಕಾರ ಕೈಗೊಂಡ ಕ್ರಮಗಳೇನು:	ಬಂದಿದೆ. ಕರುಣಾ ಪ್ರಾಣಿ ಆಶ್ರಯ ಧಾಮ" ದ ವಿರುದ್ಧ ಬಂದಿರುವ ದೂರಿನ ಕುರಿತು ತನಿಖೆ ನಡೆಸಿ ವರದಿ ಸಲ್ಲಿಸಲು ಬೀದರ್‌ನ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಶೀಘ್ರವಾಗಿ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಂಡು ಕೈಗೊಂಡ ಕ್ರಮದ ಬಗ್ಗೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲು ಸೂಚಿಸಲಾಗಿದೆ.
ಆ)	ಈ ಪ್ರಾಣಿ ಆಶ್ರಮಕ್ಕೆ ಪ್ರಾಣಿಗಳನ್ನು ಒಪ್ಪಿಸಲು ಮತ್ತು ಪ್ರಾಣಿಗಳನ್ನು ದತ್ತು ಪಡೆಯಲು ಬರುವ ಜನರಿಂದ ಈ ಸಂಸ್ಥೆಯವರು ಹಣ ವಸೂಲಿ ಮಾಡುತ್ತಿದ್ದಾರೆ ಎಂಬ ಆರೋಪಗಳು ಕೂಡ ಬಂದಿದ್ದು. ಇವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು:	
ಇ)	ಈ ಪ್ರಾಣಿ ಆಶ್ರಮದಲ್ಲಿ ಇರುವ ನಾಯಿಗಳನ್ನು ತಳಿಗಾರರಿಗೆ ಮಾರಾಟ ಮಾಡಲಾಗುತ್ತಿದೆ : ಹಾಗೂ ಅವುಗಳಿಗೆ ದಯಾ ಮರಣವನ್ನು ನೀಡಲಾಗುತ್ತಿದೆ ಎಂಬ ಆರೋಪಗಳಿದ್ದು, ಈ ಬಗ್ಗೆ ಆಶ್ರಮದ ಅಧ್ಯಕ್ಷರ ಮೇಲೆ ಪಶುಸಂಗೋಪನಾ ಇಲಾಖೆಯು ಕೈಗೊಂಡ ಕ್ರಮಗಳೇನು ?	

ಸಂ: ಪಸಂಮೀ ಇ–328 ಸಲೆವಿ 2021

(ಪ್ರಭು. ಬಿ ಚವ್ಹಾಣ್)

ಪಶುಸಂಗೋಪನೆ ಸಚಿವರು